ಶ್ರೀ ಹೆಚ್.ಎಂ.ರೇವಣ್ಣ (ಕೃಷಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಹತ್ತಿ ಸಾಗಾಣಿಕೆ ಅಧಿನಿಯಮ 1923 (1923 ರ ಕೇಂದ್ರ ಅಧಿನಿಯಮ ಸಂಖ್ಯೆ :3) ಇದರಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿರುವ ಅಧಿಸೂಚನೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಹಾಗೂ ಹತ್ತಿ ಸಾಗಾಣಿಕೆ (ಕರ್ನಾಟಕ) ನಿಯಮಗಳು 1963ನ್ನು ನಿರಸನಗೊಳಿಸುವ ಬಗ್ಗೆ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ನಿರ್ಣಯವನ್ನು ಮಂಡಿಸಲಾಗಿದೆ.

(3). ಬಾದಾಮಿ ತಾಲ್ಲೂಕಿನ ಬೂದಿನಗರ ಗ್ರಾಮದ ಅರಣ್ಯ ಸರ್ವೆ ನಂ. 41:1 ರಲ್ಲಿನ 24.00 ಹೆಕ್ಟೇರ್ ಜಮೀನು ಮೀಸಲು ಅರಣ್ಯವಾಗಿರುವುದನ್ನು ತೆಗೆದುಹಾಕುವ ಬಗ್ಗೆ ನಿರ್ಣಯ.

ಶ್ರೀ ಹೆಚ್.ವಿಶ್ವನಾಥ್ :- (ಅರಣ್ಯ ಖಾತೆ ಸಚಿವರು) ಮಾನ್ಯ ಉಪಾಧ್ಯಕ್ಷರೇ, ಬಾದಾಮಿ ತಾಲ್ಲೂಕಿನ ಬೂದಿನಗರ ಗ್ರಾಮದ ಅರಣ್ಯ ಸರ್ವೆ ನಂ.41 :1ರಲ್ಲಿನ 24.00 ಹೆಕ್ಟೇರ್ ಜಮೀನು ಮೀಸಲು ಅರಣ್ಯವಾಗಿರುವುದನ್ನು ತೆಗೆದುಹಾಕುವ ಬಗ್ಗೆ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾಪ ಏನೆಂದರೆ "ಬಾದಾಮಿ ತಾಲ್ಲೂಕಿನ ಬೂದಿನಗರ ಗ್ರಾಮದ ಅರಣ್ಯ ಸರ್ವೆ ನಂ.41:1ರಲ್ಲಿನ 24.00 ಹೆಕ್ಟೇರ್ ಜಮೀನು ಮೀಸಲು ಅರಣ್ಯವಾಗಿರುವುದನ್ನು ತೆಗೆದುಹಾಕುವ ಬಗ್ಗೆ ನಿರ್ಣಯವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು .

ಶ್ರೀ ಹೆಚ್ ವಿಶ್ವನಾಥ್ (ಅರಣ್ಯಖಾತೆ ಸಚೀವರು) :- ಮಾನ್ಯ ಉಪಾಧ್ಯಕ್ಷರೇ, ಬಾದಾಮಿ ತಾಲ್ಲೂಕಿನ ಬೂದಿನಗರ ಗ್ರಾಮದ ಅರಣ್ಯ ಸರ್ವೆ ನಂ.41 :1ರಲ್ಲಿನ 24.00 ಹೆಕ್ಟೇರ್ ಜಮೀನು ಮೀಸಲು ಅರಣ್ಯವಾಗಿರುವುದನ್ನು ತೆಗೆದುಹಾಕುವ ಬಗ್ಗೆ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು :- ನಿರ್ಣಯವನ್ನು ಮಂಡಿಸಲಾಗಿದೆ.

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ - 1994

ಉಪಾಧ್ಯಕ್ಷರು :- ಮಾನ್ಯ ಸಮಾಜ ಕಲ್ಯಾಣ ಸಚಿವರು ....

ಶ್ರೀ ಎಂ.ವೀರಪ್ಪ ಮೊಯಿಲಿ :- ಇದು ಬಹಳ ಮಹತ್ವದ ಮಸೂದೆ. ಆಯೋಗ ಮತ್ತು ಈ ಮೀಸಲಾತಿ ಬಗ್ಗೆ. ನನ್ನ ದೃಷ್ಟಿಯಲ್ಲಿ ಇದರ ಬಗ್ಗೆ ಕಡಿಮೆ ಪಕ್ಷ ನಮ್ಮ ಪಕ್ಷದ ಮತ್ತು ನಿಮ್ಮ ಪಕ್ಷದ ಕಾನ್‌ಸೆನ್‌ಸಸ್ ಬೇಕಾಗಿದೆ. ಕಾನ್‌ಸೆನ್‌ಸಸ್‌ಗೆ ಬರುವುದಕ್ಕೆ ತಾವು ಒಪ್ಪಿದರೆ, we will have discussion.

Sri R.V.Deshapande : We have no objection.

Sri M.Veerappa Moily : We will have a discussion. That we can defer. We will try to have a consensus particularly on the understanding....

ಶ್ರೀ ಆರ್.ವಿ.ದೇಶಪಾಂಡೆ :- ನಾವು ಮುಂಜಾನೆ ಹೇಳುವಾಗ, we are not against reservation. Please understand. we are for reservation. Morning we did not walk out. We only said that the way in which you are bringing is not correct. Let us have a discussion. Let everybody be taken into confidence. Then decide. This is what we have said in the morning. The Hon'ble Minister has already made a statement now

Sri M.Veerappa Moily :- This is our commitment to the people. We will have to implement the Chinnappa Reddy Commission Report. ಸಮಾಲೋಚನೆ ಮಾಡಿಕೊಂಡು, ತಮ್ಮ ಸಹಕಾರ ಇದ್ದರೆ, ನಾವು ರೆಫರ್ ಮಾಡೋಣ.

ಶ್ರೀ ವಾಟಾಳ್‌ನಾಗರಾಜ್ :- ಸಹಕಾರ ನಾವು ಯಾವಾಗಲೂ ಕೊಡುತ್ತೇವೆ.

ಉಪಾಧ್ಯಕ್ಷರು :- ಈಗ, ಕರ್ನಾಟಕ ಅನುಸೂಚಿತ ಜಾತಿ.....

ಶ್ರೀ ಆರ್.ವಿ. ದೇಶಪಾಂಡೆ :- ಅದು ಆಯಿತು.

ಉಪಾಧ್ಯಕ್ಷರು :- ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕ 1994. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು.....

ಶ್ರೀ ಆರ್.ವಿ.ದೇಶಪಾಂಡೆ :- ಇದಕ್ಕೆ ನಾವು ಅನುಮತಿ ಕೊಡುವುದಕ್ಕೆ ಮುಂಚೆ ಒಂದು ವಿಷಯ ಹೇಳಬೇಕಾಗಿದೆ. ಇದು ಕೌನ್ಸಿಲ್‌ನಲ್ಲಿ ಪಾಸ್ ಆಗಿದೆ. ಅಲ್ಲಿ ಪಾಸ್ ಆಗಿ ಇಲ್ಲಿ ಕನ್ಸಿಡರೇಷನ್‌ಗೆ ಬಂದಿದೆ. ಈಗ ಬಿಲ್‌ಗಳನ್ನು ನಮಗೆ ಕೊಟ್ಟಿದ್ದು ಯಾವಾಗ? ಎರಡು ನಿಮಿಷ ಆಯಿತು, ಅಷ್ಟೆ.

ಇದಕ್ಕೆ ಏನು ಜಸ್ಟೀಸ್ ಮಾಡಬೇಕು, ತಾವೇ ಹೇಳಿ. ಇಷ್ಟಕ್ಕೂ ತಾವು ಇಲ್ಲ, ಇದನ್ನು ಪಾಸ್ ಮಾಡಿಕೊಡಿ ಎಂದರೆ ಅದು ಬೇರೆ ಪ್ರಶ್ನೆ. ಆದ್ದರಿಂದ ನಾವು ಜಸ್ಟಿಫೈ ಮಾಡುವುದಕ್ಕೆ ಆಗುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದರು ಕೌನ್ಸಿಲ್‌ನ್ನು ಎರಡು ದಿವಸ ಮತ್ತೆ ಕರೆಯುತ್ತಾರಂತೆ. ಆವಾಗ ಇಲ್ಲಿಯೂ ಕರೆಯರಿ. ಇದರ ಬಗ್ಗೆ ಚರ್ಚೆ ಮಾಡೋಣ. ನಾವು ಇದನ್ನು ಸರಿಯಾಗಿ ನೋಡಿಲ್ಲ, ಇದು ಈಗಷ್ಟೇ ನಮ್ಮ ಕೈಗೆ ಬಂದಿದೆ. ರೂಲ್ಸ್ ಆಫ್

ಪ್ರೊಸೀಜರ್ ಪ್ರಕಾರ two days in advance you have to give the bills. Just now they have given the bills.ಹಾಗಾಗಿ ಇದು ಸರಿಯಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಇದು ಸಂವಿಧಾನಾತ್ಮಕವಾದಂಥ ಜವಾಬ್ದಾರಿ. 74ನೇ ಸಂವಿಧಾನ ತಿದ್ದುಪಡಿ 1-6-93ರಲ್ಲಿ ಇದು ಜಾರಿಗೆ ಬಂದಿದೆ. ಆ ತಿದ್ದುಪಡಿಯಲ್ಲಿ ಏನು ಹೇಳುತ್ತಾರೆ ಎಂದರೆ, ಒಂದು ವರ್ಷದೊಳಗಾಗಿ ಆ ತಿದ್ದುಪಡಿ ಕಂಡ ವಿಧೇಯಕಗಳನ್ನು ಒಳಪಡಿಸಿಕೊಂಡು ರಾಜ್ಯಗಳು ಶಾಸನಗಳನ್ನು ಮಾಡದೇ ಹೋದರೆ, ನಮ್ಮ ಈಗ ಇರತಕ್ಕಂಥ ಪುರಸಭಾ ಕಾನೂನು ಮತ್ತು ಕಾರ್ಪೋರೇಷನ್ ಕಾನೂನುಗಳು, ಅದಕ್ಕೆ ವಿರುದ್ಧವಾಗಿರತಕ್ಕಂಥ ಅಂಶಗಳೆಲ್ಲಾ ನಿಷ್ಫಲವಾಗುತ್ತದೆ. ಆದ್ದರಿಂದ ಇದರಲ್ಲಿ ಸಂವಿಧಾನಾತ್ಮಕವಾದಂಥ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೋಸ್ಕರವಾಗಿ ಆಧ್ಯಾದೇಶವನ್ನು ಸರ್ಕಾರ ಮಾಡಿದೆ. ಈಗ ನಮ್ಮ ಸಂವಿಧಾನದ ನಿರ್ದೇಶನದ ಪ್ರಕಾರ ನಾವು ಇದನ್ನು ಒಪ್ಪಲೇಬೇಕು. ಇದರ ಬಗ್ಗೆ ತಮ್ಮದು ಏನಾದರೂ ಅಭಿಪ್ರಾಯಗಳು ಇದ್ದರೆ, ತಿದ್ದುಪಡಿಯನ್ನು ತಂದು ಮಾಡಬಹುದು. ಇದಾದ ಮೇಲೆ ಸಮಗ್ರ ಮುನಿಸಿಪಾಲಿಟಿ ಕಾನೂನು ಮತ್ತು ನಗರಪಾಲಿಕೆ ಕಾನೂನನ್ನು ತರುವ ಯೋಚನೆ ಸರ್ಕಾರಕ್ಕೆ ಇದೆ. ಆದ್ದರಿಂದ ಈ ಒಂದು ಸಂವಿಧಾನದಲ್ಲಿ ಅಡಕವಾಗಿರತಕ್ಕಂಥ ಜವಾಬ್ದಾರಿಯನ್ನು ಕೈಬಿಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಮ್ಮ ಆ ಕಡೆಯಲ್ಲಿರತಕ್ಕಂಥ ಮಿತ್ರರುಗಳು ಈ ವಿಧೇಯಕವನ್ನು ಒಪ್ಪಿ.....

ಶ್ರೀ ಸಿ.ಬೈರೇಗೌಡ :- ದಯವಿಟ್ಟು ಕೇಳಿ. ಇವತ್ತು ನಮಗೆ ನಾವೇ ಪ್ರಶ್ನೆ ಹಾಕಿಕೊಳ್ಳೋಣ. ಅನೇಕ ಬಿಲ್‌ಗಳು ಇವತ್ತು ಪಾಸ್ ಆಗಿದೆ. ಈಗ ಮಾನ್ಯ ಧರ್ಮಸಿಂಗ್ ಅವರು ಕೂಡಲಸಂಗಮ ನಿಗಮದ ಒಂದು ಬಿಲ್ ಅನ್ನು ಪಾಸ್ ಮಾಡಿಸಿಕೊಂಡರು. ಆ ಬಿಲ್ ಅನ್ನು ಮಂತ್ರಿಗಳು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಓದಿದ್ದರೆ ಸಂತೋಷ. ನಮಗಂತೂ ಅದನ್ನು ಓದುವುದಕ್ಕೂ ಕೂಡ ಅವಕಾಶ ಸಿಗಲಿಲ್ಲ. ಕಣ್ಣುಮುಚ್ಚಿಕೊಂಡು ನಾವು ಇಲ್ಲಿ ಅವರು ಹೇಳಿದಕ್ಕೆಲ್ಲಾ ಕೈಯೆತ್ತಿ ಹೌದಪ್ಪಗಳಾಗತಕ್ಕ ಪರಿಸ್ಥಿತಿಗೆ ನಮ್ಮನ್ನು ತೆಗೆದುಕೊಂಡು ಹೋದರೆ ಹೇಗೆ? ಈ ನಿಮಿಷದವರೆಗೂ ಆ ವಿಧೇಯಕದ ಕಾಪಿ ನಮಗೆ ಸಿಕ್ಕಿಲ್ಲ. ಕೊನೇ ಪಕ್ಷ ಅವರ ಟೈಟಲ್ ಆದರೂ ಓದುವುದು ಬೇಡವೇ? ಅದರಲ್ಲಿ ಏನಿದೆ, ಇಲ್ಲಿ ಎಂಬುದನ್ನು ನೋಡುವುದೂ ಬೇಡವೇ? ನಾವು ಹೊರಗಡೆ ಹೋಗುತ್ತೇವೆ, ನೀವು ಮಾಡಿಕೊಳ್ಳಿ. ಈಗ ಅಷ್ಟು ಮಾಡಬೇಕಾಗುತ್ತದೆ.

ಶ್ರೀ ಆರ್.ವಿ.. ದೇಶಪಾಂಡೆ : ಈವತ್ತು ನಾವು ಈ ಬಿಲ್ ಪಾಸ್ ಮಾಡಿ ಕೊಟ್ಟರೆ ಬೇಜವಾಬ್ದಾರರು ಆಗುತ್ತೇವೆ.

1994ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ